ಓ ಎಸ್ ನಂಃ 176/2017
ಡಿ.ಡಬ್ಲ್ಯೂ - 01
ದಿನಾಂಕಃ 22.07.2026.

<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಬಿ ವಕೀಲರಿಂದಃ</u>

ಸರ್ವೆ ನಂ. 42/1 ರಲ್ಲಿ 7 ಎಕರೆ 07 ಗುಂಟೆ, ಸರ್ವೆ ನಂ. 42/2 ರಲ್ಲಿ 9 ಎಕರೆ 25 ಗುಂಟೆ ನನ್ನ ಅಜ್ಜಿಯ ಹೆಸರಿಗೆ ಇತ್ತು ಎಂದು ತೋರಿಸಲು ನಾನು ಪಹಣಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ಸ್ವತ್ತು ಸರ್ಕಾರದಿಂದ ದೊಡ್ಡಕ್ಕನವರಿಗೆ ಬಂದಿರುವುದಕ್ಕೆ ಸಂಬಂಧಿಸಿದಂತೆ ಹಕ್ಕು ಪತ್ರ ಮತ್ತು ಇತರ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ದೊಡ್ಡಕ್ಕನವರಿಗೆ ಯಾವ ವರ್ಷ ಸರ್ಕಾರದಿಂದ ಬಂತು ಎಂದು ಹೇಳಲು ಸಾಧ್ಯವಿಲ್ಲ. ದೊಡ್ಡಕ್ಕನವರ ಕುಟುಂಬದಲ್ಲಿ ಅಂದಾಜು 25-30 ಜನ ಇದ್ದೇವೆ. ನಾನು ನನ್ನ ಪ್ರಮಾಣಪತ್ರದಲ್ಲಿ ಊರನ್ನು ಬಿಟ್ಟು ಹೋಗಿರುವುದಾಗಿ ಬರೆಸಿರುತ್ತೇನೆ ಎಂದರೆ ಸರಿ . ಕೂಲಿ ಕೆಲಸಕ್ಕಾಗಿ ಹೋಗಿರುತ್ತೇನೆ. 10-15 ವರ್ಷಗಳ ಹಿಂದೆ ಹೋಗಿರುತ್ತೇನೆ. ಚಿಕ್ಕಮಗಳೂರು ಮತ್ತು ಹಾಸನದ ಭಾಗದಲ್ಲಿ ನಾನು ವಾಸವಿದ್ದೆ. ಅಂದಾಜು 2 ವರ್ಷ ಹೀಗೆ ವಾಸವಿದ್ದೆ. ನಾನು ಯಾವುದೇ ಪಂಚಾಯಿತಿಯನ್ನು ಮಾಡಿರುವುದಿಲ್ಲ ಮತ್ತು ಪ್ರಮಾಣಪತ್ರದಲ್ಲಿಯೂ ಸಹ ಸದರಿ ವಿಚಾರವನ್ನು ಬರೆಸಿರುವುದಿಲ್ಲ ಎಂದರೆ ಸರಿ.

ಪೋಲೀಸ್ ನವರಿಗೆ ವಾದಿಯ ವಿರುದ್ದ ದೂರನ್ನು ನೀಡಿದ್ದು ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನಾನು ಹಾಜರುಪಡಿಸಿರುತ್ತೇನೆ. ಗೋವಿಂದಪ್ಪ ಎಂ ಎಲ್ ಎ ವಾದಿಗೆ ಸಹಾಯ ಮಾಡಿರುತ್ತಾರೆ ಆದುದರಿಂದ ಪೋಲೀಸ ರವರು ಸಹ ವಾದಿಗೆ ಸಹಾಯ ಮಾಡಿರುತ್ತಾರೆ. ಪೋಲೀಸ ರವರಿಗೆ ದೂರನ್ನು ನೀಡಿ 10 ವರ್ಷ ಅಗಿರಬಹುದು. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಅಜ್ಜಿ ದೊಡ್ಡಕ್ಕನವರಿಗೂ ಸಹ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಹ ಯರ್ರಪ್ಪ ಬಿನ್ ವೆಂಕಟಪ್ಪ ನವರಿಗೆ ಸೇರಿದ ಜಮೀನು ಎಂದರೆ ಸರಿಯಲ್ಲ. ಯರ್ರಪ್ಪ ನವರು 25.02.1953 ರಂದು ಗುತ್ಯಮ್ಮನವರ ತಂದೆಗೆ ಶುದ್ದ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು ಸಾಕ್ಷಿಯು ಮುಂದುವರೆದು ಪಹಣಿಯು ಗುತ್ಯಮ್ಮ ರಮೇಶ್ ರವರ ಹೆಸರಿನಿಂದ ರದ್ದಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಪಹಣಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಯಾವ ಕಾರಣಕ್ಕೆ ರದ್ದಾಯಿತು ಎಂದು ನನಗೆ ಗೊತ್ತಿಲ್ಲ. ನಾನು ಗುತ್ಯಮ್ಮ ರಮೇಶ್ ರವರ ಹೆಸರಿನಿಂದ ರದ್ದಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೇ ನಂ. 42/1 ರಲ್ಲಿ 7 ಎಕರೆ 07 ಗುಂಟೆ, ಸರ್ವೇ ನಂ. 42/2 ರಲ್ಲಿ 9 ಎಕರೆ 25 ಗುಂಟೆ ನಮ್ಮ ಅಜ್ಜಿಗೆ ಸೇರಿದ ಯಾವುದೇ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ನಾವು 25-30 ಜನ ಮನೆಯಲ್ಲಿ ಇರುವ ಕಾರಣ ವಾದಿಯರಿಗೆ ತೊಂದರೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ತಡೆಯಾಜ್ಞೆ ಬಂದ ನಂತರ ನಾವು ಜಮೀನಿಗೆ ಹೋಗುವುದನ್ನುಬಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವೇ ಸಾಗುವಳಿ ಮಾಡುತ್ತಿರುತ್ತೇವೆ. ನಾವೇ ಸಾಗುವಳಿ ಮಾಡುತ್ತಿದ್ದೇವೆ ಎಂದು ತೋರಿಸಲು ನನ್ನಲ್ಲಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ, ನನಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.